ಜಿಗುಟು ಬಲೂನು ಲೋಳೆಯಂತ ರಸ ಬಿಡುತ್ತಲೇ ಕಡಲ ನೀರನ್ನು ಕುಡಿಯತೊಡಗಿತು. ಕುತೂಹಲದಿಂದ ಇತರ ಹುಡುಗರು ಸುತ್ತುವರಿದು ಆ ಬಲೂನಿನ ಹೊಟ್ಟೆ ಗುಡಾಣದಂತಾಗುವುದನ್ನು ಅಚ್ಚರಿಯಿಂದಲೇ ನೋಡತೊಡಗಿದ್ದರು.

'ಇನ್ನೂ ನೀರು ತುಂಬಿಸಾ... ಅಷ್ಟು ಬೇಗ ಏನೂ ಆಗೋದಿಲ್ಲ. ತುಂಬಾ ದೊಡ್ಡದಾಗುತ್ತೆ' ಎಂದು ಬಾಜಿ ಕಟ್ಟಿದ್ದ ಹುಡುಗ ನೀರು ತುಂಬಿಸುತ್ತಿದ್ದವನನ್ನು ಹುರಿದುಂಬಿಸುತ್ತಿದ್ದ. 'ನೋಡಾ ನೋಡಾ... ನಾನು ಹೇಳಿದ್ರೆ ರೈಲು ಅಲ್ವಾ ನಿಮ್ಗೆ... ಎಲ್ಲಿ ನೂರು ರುಪಾಯಿ ಬರ್ಲಿ ನೋಡೋಣ' ಅಂತ ಬಾಜಿಯಲ್ಲಿ ಗೆದ್ದ ಖುಷಿಗೆ ಆ ಹುಡುಗ ಕುಣಿಯುತ್ತಲೇ ಹೇಳಿದ. ಆ ದಿನದ ಫುಟ್ಬಾಲ್ ಆಟ ಬಲೂನಿನ ಕುತೂಹಲದಲ್ಲೇ ಮುಗಿದು ಹೋಗುವುದರಲ್ಲಿತ್ತು. ಹುಡುಗರ ಈ ಗಲಾಟೆಯನ್ನು ಹತ್ತಿರದ ಕಲ್ಲುಬಂಡೆಯ ಮೇಲೆ ಕುಳಿತು ನೋಡುತ್ತ ಮಜಾ ತೆಗೆದುಕೊಳ್ಳುತ್ತಿದ್ದ ಜನ್ನತ್ ನಿಗೆ ಜೋರಾಗಿ ನಗುಬಂತು. ಝೂಮ್ ಮಾಡಿಕೊಂಡು ಆ ಹುಡುಗರ ಗುಂಪಿನ ಫೋಟೊ ಹೊಡೆದ. ಕಳೆದೆರಡು ವಾರದಿಂದ ಹುಡುಕುತ್ತಿದ್ದ ನೆಮ್ಮದಿಯೊಂದು ಸಿಕ್ಕ ಖುಷಿ ಅವನಲ್ಲಿತ್ತು.

ಅಷ್ಟರಲ್ಲೇ ಮೊಬೈಲ್ ರಿಂಗಣಿಸಿತು. ಚೀಫ್ ಎಡಿಟರ್ ಎಂದು ತೋರುತ್ತಿದ್ದ ನಂಬರ್ ನೋಡಿದವನೇ 'ಥೂ... ಇವನದ್ದೊಂದು ಹಾಳುಜನ್ಮ' ಎಂದು ಫೋನ್ ಎತ್ತುವುದಕ್ಕೂ ಆಸಕ್ತಿ ತೋರದೆ ಮಕ್ಕಳ ಆಟ ನೋಡುತ್ತಾ ಮತ್ತೆ ವಿಹಂಗಮ ಸಂಜೆ ಸೌಂದರ್ಯಲ್ಲೊಂದು ಬಿಂದುವಾದ. 'ಕಳೆದೆರಡು ವಾರದಿಂದ ಒಂದೇ ಒಂದು ಕಥೆ ಬರೆದಿಲ್ಲ. ಅಡ್ವಾನ್ಸ್ ಪೇಮೆಂಟ್ ಬೇರೆ ಬಂದಿದೆ. ಈ ಬಾರಿ ಫೋನ್ ತೆಗೆದರೆ ಅವನು ಉಗಿಯುವುದು ಗ್ಯಾರಂಟಿ. ಕಳೆದ ವಾರವಂತೂ ಸಂಬಂಧಿಕರ ಮದುವೆಯೆಂದು ಸಂಭಾಳಿಸಿದ್ದೇನೆ. ಆದರೆ, ಈ ಬಾರಿ...' ಅವನು ಮತ್ತೆ ಕಡಲ ಶಿಶುವಾಗಿ ಮಕ್ಕಳ ಕುತೂಹಲವನ್ನೇ ನೋಡುತ್ತಾ ಕುಳಿತ. ಬಲೂನು ಅದಾಗಲೇ ಇನ್ನಷ್ಟು ಊದಿಕೊಂಡು ಉಬ್ಬಿ ಹೋಗಿತ್ತು.

ಕಡಲಿನ ಅಲೆಗಳ ಏರಿಳಿತ ಸೂರ್ಯ ಕಂತುತ್ತಿದ್ದಂತೆ ಅಧಿಕಗೊಳ್ಳುತ್ತಿತ್ತು. ಅಲ್ಲಿ ಸುಯ್ಯುವ ಗಾಳಿಗೆ ತೆಂಗಿನ ಮರದ ಓಲೆಗಳು ವಿನಯದಿಂದ ಬಳುಕುತ್ತಿದ್ದರೆ, ಅಲೆಗಳ ಸಪ್ಪಳವೂ ಸೇರಿ ತಣ್ಣಗಿನ ನಿಸರ್ಗದ ಸಂಗೀತ ರಸಮಂಜರಿಗೆ ಪೂರ್ವ ತಯ್ಯಾರಿಯಂತಿತ್ತು. ದೂರದಲ್ಲೇ ಚಲಿಸುವ ಕಪ್ಪು ವಸ್ತ್ರಧಾರಿಯ ಚಹರೆಯೊಂದು ಮಬ್ಬುಗತ್ತಲಲ್ಲಿ ಹತ್ತಿರವಾದಂತೆ ತೋರುತ್ತಿತ್ತು. ಆ ವಸ್ತ್ರದ ಬದಿಗಳು ಗಾಳಿಯಲ್ಲಿ ತೇಲುತ್ತಿದ್ದರೆ ಅದು ಒಬ್ಬ ಬುರ್ಖಾಧಾರಿಣಿ ಹೆಂಗಸು ಎಂದು ಒಂದೇನೋಟಕ್ಕೆ ಹೇಳಬಹುದಿತ್ತು. ಒಂಟಿ ಬುರ್ಖಾದ ಮಹಿಳೆ ಕೈಯಾಡಿಸುತ್ತಾ ಒಬ್ಬಳೇ ಮಾತನಾಡುತ್ತಾ ಬರಿಗಾಲಿನಲ್ಲಿ ಬರುತ್ತಿರುವವಳಂತೆ ಕಂಡಳು. ಆ ನೋಟ ಜನ್ನತ್‌ಗೆ ವಿಶೇಷ ಅನಿಸಿತು. ಅವಳ ಬರುವಿಕೆಯನ್ನು ಕಂಡ ಆ ದೃಶ್ಯವನ್ನೂ ಮುಬೈಲಿನಲ್ಲಿ ಸೆರೆ ಹಿಡಿದುಕೊಂಡ. ಅವಳು ಮಕ್ಕಳ ಗುಂಪಿಗೆ ಹತ್ತಿರವಾದಂತೆ, ಅವಳ ಮುಖಾರವಿಂದ ಸ್ಪಷ್ಟವಾಗಿ ಕಾಣತೊಡಗಿತು. ವಿಚಿತ್ರವೆಂದರೆ ಆ ಬುರ್ಖಾ ಮಹಿಳೆಯ ತಲೆಯ ಸುತ್ತಲೂ ಬಿಳಿಯ ಹೊಗೆ. ಅಬ್ಬಾ... ಇದೇನು? ಜನ್ನತ್‌ಗೆ ಆ ನೋಟ ಕನಸಿನಂತಹ ಅನುಭವ. 'ಅಲ್ಲ, ನಮ್ಮಲ್ಲಿ ಮಹಿಳೆಯರು ಸಿಗರೇಟು ಸೇದುವುದೇ ಕದ್ದುಮುಚ್ಚಿ. ಆದರೂ ಪೇಟೆಗಳಲ್ಲಿ ಕೆಲವೊಮ್ಮೆ ಸಿಗರೇಟು ಸೇದುವವರನ್ನು ಕಂಡದ್ದಿದೆ. ಅಂಥದ್ದರಲ್ಲಿ ಇವಳು ಯಾವ ಊರಿನ ಗಂಡು ಬೀರಿ! ಅದೂ ಬುರ್ಖಾ ಹಾಕಿ ಸಾರ್ವಜನಿಕವಾಗಿ ಹೀಗೆ ಬೀಡಿ ಸೇದುವುದೆಂದರೆ? ಒಮ್ಮೆಲೇ ಲಿಂಗಸಮಾನತೆಯ ಪರವಾದ ಹೋರಾಟದ ಬಗ್ಗೆ ಯೋಚಿಸಿ ದಿಗ್ಭ್ರಮೆಯಾಯಿತು. ಆ ಹೆಂಗಸು ಇನ್ನಷ್ಟು ಹತ್ತಿರವಾದಳು. ಜೋಲುಮುಖ, ಕುಳಿಬಿದ್ದ ಕಣ್ಣುಗಳು, ಕೊಳೆಯಾದ ಬುರ್ಖಾ. ಜನ್ನತ್ ತದೇಕಚಿತ್ತದಿಂದ ಅವಳನ್ನೇ ನೋಡುತ್ತ ಅವಾಕ್ಕಾಗಿದ್ದ. ಇದ್ಯಾವುದನ್ನೂ ಗಮನಿಸದ ಆ ಮಧ್ಯ ವಯಸ್ಕ ಮಹಿಳೆ ಮಕ್ಕಳ ಆಟದ ಕಡೆಗೆ ನೋಡುತ್ತಾ, 'ಏ ಬ್ಯಾವರ್ಸಿಗಳೇ...' ಎಂದು ಕೂಗಾಡಿದಳು. ಅಬ್ಬಾ, ಅಷ್ಟು ಜೋರುದನಿಯಲ್ಲಿ ಸಾರ್ವಜನಿಕವಾಗಿ ಬಯ್ಯುವುದೆಂದರೆ ಇವಳು ಎಲ್ಲಾ ಎಲ್ಲೆಯನ್ನೂ ಮೀರಿದವಳೆನಿಸಿತು. 'ಇಲ್ನೋಡ್ರೋ ಬಿಕನಾಸಿ ಮಕ್ಕಳೇ... ಅದು ನಿರೋಧ್ ಅಂತ ಗೊತ್ತಾಗೋದಿಲ್ವೇನ್ರೋ ನಿಮ್ಗೆ. ಎಸೀರೋ.. ಅದನ್ನ' ಎಂದು ಗದರಿಸಿದಾಗ ಮಕ್ಕಳಿಗೇನು ಅರ್ಥವಾಯಿತೋ, ಅವಳ ಅವತಾರ ಕಂಡು 'ಏ, ಚುತ್ತುಕೊರೊಡಿ ಮಗಾ... ಓಡು ಓಡು' ನೀರು